**ಇಂದು ದಿನಾಂಕಃ 29-11-2024 ಸಾಕ್ಷಿ ಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ವಾದಿ ಪರವಾಗಿ ಶ್ರೀ JPA ವಕೀಲರಿಂದಃ-**

ವಾದಿ ನನ್ನ ತಂದೆ. ನನ್ನ ಅಜ್ಜನ ಹೆಸರು ಗಂಗೂನಾಯಕ. ಸದರಿ ಗಂಗೂ ರವರ ತಂದೆ ಹೆಸರು ನನಗೆ ಗೊತ್ತಿಲ್ಲ. ನನ್ನ ತಂದೆ ಒಟ್ಟು 6 ಜನ ಸಹೋದರರು ಇದ್ದಾರೆ. ಅವರಲ್ಲಿ ನಾಲ್ಕು ಜನ ಜೀವಂತ ಇದ್ದು ಇಬ್ಬರು ಮೃತಪಟ್ಟಿರುತ್ತಾರೆ. ಅವರಲ್ಲಿ ಭೀಮು ರವರು ಮೃತಪಟ್ಟು ಎಷ್ಟು ವರ್ಷಗಳಾಗಿವೆ ಎಂದು ನನಗೆ ಗೊತ್ತಿಲ್ಲ ಮತ್ತು ಬಾಬು ರವರು ಮೃತಪಟ್ಟು ಈಗ 1 ವರ್ಷಕ್ಕೂ ಹೆಚ್ಚು ಆಗಿದೆ. ಭೀಮು ರವರಿಗೆ ಹೆಂಡತಿ ಮತ್ತು ಮಕ್ಕಳು ಇದ್ದಾರೆ. ನನ್ನ ತಂದೆಯ ಸಹೋದರರು ಈಗ ಸುಮಾರು 10 ವರ್ಷಗಳ ಹಿಂದೆ ಬೇರೆ ಬೇರೆಯಾಗಿ ವಾಸವಿದ್ದಾರೆ. ಗಂಗೂರವರಿಗೆ ಒಟ್ಟು ಎಷ್ಟು ಜಮೀನು ಇದೆ ಎಂದು ಪ್ರಶ್ನಿಸಿದಾಗ ಸಾಕ್ಷಿ ಸರ್ವೆ ನಂ. 90/10, 90/9 ಮತ್ತು ತಾಂಡಾಲ್ಲಿ 8 ಎಕರೆ ಜಮೀನು ಇದೆ ಎಂದು ನುಡಿಯುತ್ತಾರೆ. ನನ್ನ ತಂದೆಯ ಸಹೋದರರಿಗೆ ಎಷ್ಟು ಜಮೀನುಗಳು ಮತ್ತು ಯಾವ ಸರ್ವೆ ನಂ.ಗಳಲ್ಲಿ ಪಾಲುಗಾರಿಕೆಯಲ್ಲಿ ಬಂದಿವೆ ಎಂದು ನನಗೆ ಗೊತ್ತಿಲ್ಲ.

ಸರ್ವೆ ನಂ. 90 ರಲ್ಲಿ 9 ಪಹಣಿಗಳು ಮಾತ್ರ ಇವೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 90 ರಲಿ ನನ್ನ ಅಜ್ಜನಿಗೆ 3 ಹಿಸ್ಸೆಗಳಲ್ಲಿ ಜಮೀನುಗಳು ಬಂದಿದವು ಎಂದರೆ ಸಾಕ್ಷಿ 2 ಹಿಸ್ಸಾಗಳು ಸರಿ ಇವೆ ಉಳಿದ ಒಂದು ಹಿಸ್ಸಾ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಅಜ್ಜ 90 ರಲ್ಲಿರುವ ತಮಗೆ ಬಂದಿರುವ 3 ಹಿಸ್ಸಾಗಳಲ್ಲಿರುವ ಜಮೀನನ್ನು ಬೇರೆಯವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅವುಗಳಲ್ಲಿ ನನ್ನ ಅಜ್ಜ ಒಂದು ಹಿಸ್ಸಾವನ್ನು ನಾನು ಜಮೀಸುವ ಮೊದಲು ಭೀಮಣ್ಣ ರವರಿಗೆ ಮಾರಾಟ ಮಾಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಅಜ್ಜ ಎರಡು ಹಿಸ್ಸಾಗಳಲ್ಲಿರುವ ಜಮೀನು ಪಾಂಡುರಂಗ ತಂದೆ ಮಾನಯ್ಯ ರವರಿಗೆ ಮಾರಾಟ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಸರ್ವೆ ನಂ. 90 ರಲ್ಲಿ ನನ್ನ ಅಜ್ಜ ಜಮೀನನ್ನು ಮಾರಾಟ ಮಾಡಿದ ನಂತರ ಅವರಿಗೆ ಯಾವುದೇ ಜಮೀನು ಉಳಿದಿರಲ್ಲಿಲ್ಲ ಎಂದರೆ ಸರಿಯಲ್ಲ. ಪಾಲುಗಾರಿಕೆಯಲಿ ನನ್ನ ತಂದೆಗೆ ದಾವಾ ಜಮೀನು ಬಂದಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ. 90 ರಲ್ಲಿರುವ ಜಮೀನು ಪಾಲುಗರಿಕೆ ಆಗಿರುತ್ತದೆ ಎಂದು ಮತ್ತು ಅದರಲ್ಲಿ ನನ್ನ ತಂದೆಗೆ ದಾವಾ ಜಮೀನು ಬಂದಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ. 90 ರಲ್ಲಿರುವ ಜಮೀನಿಗೆ ಹಾಗೂ ವಾದಿ ಮತ್ತು ಆತನ ಸಹೋದರರಿಗೆ ಯಾವುದೆ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ದಾವಾ ಜಮೀನಿನ ಮಾಲೀಕ ಮತ್ತು ಕಬ್ಜಾದಾರರು ವಾದಿ ಇರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಜಮೀನಿಗೆ ಹಾಗೂ ವಾದಿಗೆ ಮಾಲೀಕತವದಿಂದಾಗಲೀ ಅಥವಾ ಕಬ್ಜೆಯಿಂದಾಗಲೀ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ವಾದಿ ನನ್ನ ತಂದೆಯಿದ್ದ ಕಾರಣ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲಾ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು,
ಚಿಂಚೋಳಿ